KASM620003572024

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ.

: **ಉಪಸ್ಥಿತರು** :

**ಶ್ರೀ ಮಾದೇಶ ಎಂ.ವಿ.,** ಬಿ.ಕಾಂ., ಎಲ್.ಎಲ್.ಬಿ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಾಗರ.

ದಿನಾಂಕಃ 5 ನೇ ಏಪ್ರಿಲ್ 2025

**ಸಿ.ಸಿ.ಸಂಖ್ಯೆಃ 173/2024**

| | |
|---|---|
| **ಫಿರ್ಯಾದುದಾರರು** | ಸರ್ಕಾರದ ಪರವಾಗಿ ಸಾಗರ ಪೋಲೀಸ್ ಠಾಣೆ. |
| | **(ಪ್ರತಿನಿಧಿಸಿದವರು ಸಹಾಯಕ ಸರ್ಕಾರಿ ಅಭಿಯೋಜಕರು)** |

**- ವಿರುದ್ಧ -**

| | |
|---|---|
| **ಆರೋಪಿತ** | ಪುಂಡಲೀಕ ಚೌಧರಿ<br>ಕೆ ಪಿ ಚೌಧರಿ |

| | |
|---|---|
| | ವಯಸ್ಸು 56 ವರ್ಷ,<br>ವಾಸಃ ಸಮೃದ್ಧಿ<br>ಆರ್ ಎಂ ಸಿ ರಸ್ತೆ, ಶ್ರೀಧರ ನಗರ,<br>1 ನೇ ಮುಖ್ಯ ರಸ್ತೆ, 3 ನೇ ಕ್ರಾಸ್<br>ಸಾಗರ ಟೌನ್. |
| | *(ಪ್ರತಿನಿಧಿಸಿದವರು, **ವಿ ಶಂಕರ್ – ವಕೀಲರು**)* |

| | |
|---|---|
| ಅಪರಾಧ ನಡೆದ ದಿನಾಂಕ | 18-01-2024 |
| ಅಪರಾಧ ವರದಿಯಾದ ದಿನಾಂಕ | 18-01-2024 |
| ಪಿರ್ಯಾದುದಾರರ ಹೆಸರು | ಸಂತೋಷ್ ಡಿ ಆರ್ |
| ಆರೋಪಿತರ ಮೇಲೆ ಹೊರಿಸಿದ ಆರೋಪಗಳು | ಭಾ.ದಂ.ಸಂ ಕಲಂ 504, 506, 324 |
| ನ್ಯಾಯಾಲಯದ ಆದೇಶ | ಆರೋಪಿತನ ಅರ್ಜಿಯನ್ನು ತಿರಸ್ಕರಿಸಲಾಗಿದೆ. |

**ದಂಡ ಪ್ರಕ್ರಿಯಾ ಸಂಹಿತೆ ಕಲಂ 239 ರಡಿಯಲ್ಲಿ ಆರೋಪಿತನ ವಿಮೋಚನೆಗಾಗಿ, ಸಲ್ಲಿಸಿದ ಅರ್ಜಿಯ ಮೇಲಿನ ಆದೇಶ**

ಸರ್ಕಾರದ ಪರವಾಗಿ ಸಾಗರ ಟೌನ್ ಪೋಲೀಸ್ ಠಾಣೆ, ಉಪನಿರೀಕ್ಷಕರು, ತಮ್ಮ ಠಾಣಾ ಗುನ್ನಾ ಸಂಖ್ಯೆ:22/2024 ರಂತೆ ಪ್ರಕರಣವನ್ನು ನೊಂದಾಯಿಸಿಕೊಂಡು, ತನಿಖೆ ಮಾಡಿ, ಆರೋಪಿತನು

ಭಾರತೀಯ ದಂಡ ಸಂಹಿತೆಯ ಕಲಂ 504,506,324 ರಡಿಯಲ್ಲಿನ ಆರೋಪಕ್ಕಾಗಿ ದಂಡಿಸಬಹುದಾದ ಅಪರಾಧವನ್ನು ಎಸಗಿದ್ದಾನೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಆರೋಪಿತನಿಗೆ ಸಮನ್ಸ್ ಜಾರಿ ಮಾಡಲಾಗಿ, ಅರೋಪಿತನು ನ್ಯಾಯಾಲಯಕ್ಕೆ ಹಾಜರಾಗಿ, ತಮ್ಮ ವಕೀಲರ ಮುಖಾಂತರ ಜಾಮೀನು ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯಕ್ಕೆ ಅಗತ್ಯವಾದ ಜಾಮೀನು ನೀಡಿದ್ದರಿಂದ, ಆರೋಪಿತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಆರೋಪಿತನಿಗೆ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ. 207ರ ರೀತಿ ಅಗತ್ಯಪಡಿಸಿರುವಂತೆ, ದೋಷಾರೋಪಣೆ ಪಟ್ಟಿ ಹಾಗೂ ಯುಕ್ತ ದಾಖಲೆಗಳ ನಕಲುಗಳನ್ನು ಒದಗಿಸಲಾಗಿದೆ. ನಂತರ, ಪ್ರಕರಣವನ್ನು ದೋಷಾರೋಪಣೆ/ಆಪಾದನೆ ರಚಿಸುವುದಕ್ಕಾಗಿ ಮುಂದೂಡಲಾಯಿತು. ಈ ಹಂತದಲ್ಲಿ ಆರೋಪಿತನು ದಂಡ ಪ್ರಕ್ರಿಯಾ ಸಂಹಿತೆ ಕಲಂ 239 ರಡಿಯಲ್ಲಿ ತನ್ನ ವಿಮೋಚನೆಗಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

3. ಸದರಿ ಅರ್ಜಿಯಲ್ಲಿ ಆರೋಪಿತನು ಹೇಳುವುದೇನೆಂದರೆ, ಆರೋಪಿ ಮತ್ತು ಪಿರ್ಯಾದುದಾರರು ಪರಸ್ಪರ ಪರಿಚಿತರಿರುತ್ತಾರೆ. ಆರೋಪಿಯು ಅಂಚೆ ಇಲಾಖೆಯ ನೌಕರರಾಗಿದ್ದು, ಘಟನೆಯ ಕೆಲವು ದಿನಗಳ ಮೊದಲು

ಆರೋಪಿಯು ಶಬರಿಮಲೆ ಯಾತ್ರೆಗೆಂದು ರಜೆಯಲ್ಲಿದ್ದು, ಘಟನೆಯ ಹಿಂದಿನ ದಿನ ಶಬರಿ ಮಲೆಯಿಂದ ವಾಪಾಸ್ ಸಾಗರಕ್ಕೆ ಬಂದಿರುತ್ತಾರೆ. ಯಾತ್ರೆಯ ಪ್ರವಾಸದಿಂದ ಸುಸ್ತಾಗಿದ್ದ ಆರೋಪಿಯು ತಮ್ಮ ರಜೆಯನ್ನು ಮತ್ತೊಂದು ದಿವಸ ವಿಸ್ತರಿಸಲು ಇಲಾಖೆಯ ಮುಖ್ಯಸ್ಥರನ್ನು ಕೋರಿಕೊಳ್ಳಲು ಕಛೇರಿಗೆ ಹೋಗಿದ್ದಾಗ, ಕೆಲಸದ ಒತ್ತಡ ತುಂಬಾ ಇದೆ, ಕೆಲವರು ರಜೆಯಲ್ಲಿದ್ದಾರೆ. ಈಗ ನಿನಗೆ ರಜೆಯನ್ನು ಮುಂದುವರೆಸಲು ಸಾಧ್ಯವಿಲ್ಲ ಎಂದು ಹೇಳಿದ್ದರಿಂದ, ಆರೋಪಿಯು ಬೇರೆ ದಾರಿ ಕಾಣದೇ, ಒಲ್ಲದ ಮನಸಿನಿಂದ ಕೆಲಸಕೆ, ಹಾಜರಾಗಿರುತ್ತಾರೆ. ಕೆಲಸದ ಸಮಯ ಸಮೀಪ ಇದ್ದುದರಿಂದ, ಆರೋಪಿಯು ಆ ದಿನ ಸಮವಸ್ತ್ರ ಧರಿಸದೇ ಕರ್ತವ್ಯ ನಿರ್ವಹಿಸಿರುತ್ತಾರೆ. ಈ ರೀತಿ ಇಲಾಖೆಯ ಸಮವಸ್ತ್ರ ಧರಿಸದೇ ಕರ್ತವ್ಯ ನಿರ್ವಹಿಸಿದ ಕಾರಣ, ಆರೋಪಿಗೆ ಇಲಾಖೆಯ ಮುಖ್ಯಸ್ಥರು ಅಂದು ನೋಟೀಸ್ ಕೂಡ ಜಾರಿ ಮಾಡಿರುತ್ತಾರೆ. ಆದರೆ, ಘಟನೆಯ ದಿನ ಆರೋಪಿಯ ಕರ್ತವ್ಯ ಕ್ಷೇತ್ರ ಗಾಂಧಿ ನಗರ, ಸಾಗರ ಟೌನ್ ಬೀಟ್ ಸಂಖ್ಯೆ 03 ಆಗಿದ್ದು, ಸದರಿ ಹೋಟೆಲ್ ಇರುವ ಪ್ರದೇಶ ಇದೇ ಕಾರ್ಯ ವ್ಯಾಪ್ತಿಯಲ್ಲಿರುತ್ತದೆ. ದಿನಾಂಕ:18-01-2024 ರಂದು ಬೆಳಿಗ್ಗೆ ಸುಮಾರು 9-00 ಗಂಟೆಗೆ ಅಂಚೆ ಇಲಾಖೆಯ ಪ್ರಧಾನ ಕಛೇರಿಗೆ ಬಂದಿದ್ದ ಆರೋಪಿಯು, ರಜೆ ದೊರಕದ ಕಾರಣ ತಕ್ಷಣ ಕರ್ತವ್ಯಕ್ಕೆ ಹಾಜರಾಗಿದ್ದು, ಹಾಜರಾತಿ ಪುಸ್ತಕಕ್ಕೆ ಸಹಿ ಮಾಡಿ, ಅಂಚೆ ಲಕೋಟೆಗಳನ್ನು ಪ್ರದೇಶವಾರು

ವಿಭಾಗಿಸಿಕೊಂಡು, ಅಂಚೆ ಇಲಾಖೆಯಿಂದ ಸುಮಾರು 12 ಗಂಟೆಗೆ ಅಂಚೆ ಲಕೋಟೆ ವಿತರಣೆ ಮಾಡಲು ತಮ್ಮ ಕಾರ್ಯ ಕ್ಷೇತ್ರ ವ್ಯಾಪ್ತಿಯಲ್ಲಿ ಕರ್ತವ್ಯಕ್ಕೆ ತೆರಳಿರುತ್ತಾರೆ. ಅಂದು ಘಟನಾ ಸ್ಥಳಕ್ಕೆ ಬರುವಾಗ, ಸುಮಾರು 12-45 ಸಮಯ ಆಗಿದ್ದು, ಆರೋಪಿಯು ಪಿರ್ಯಾದು ದಾರರ ಹೋಟೆಲ್‌ಗೆ ತೆರಳಿದ್ದಾಗ, ಪಿರ್ಯಾದುದಾರರು ಕ್ಯಾಷ್ ಕೌಂಟರ್‌ನಲ್ಲಿದ್ದರು. ಆಗ ಆರೋಪಿಯು ತನಗೆ ಪಿರ್ಯಾದುದಾರರು 4 ಲಕ್ಷ ರೂಪಾಯಿ ಹಣ ಕೊಡುವುದು ಬಾಕಿ ಇದ್ದು, ಅದನ್ನು ಕೊಡುವಂತೆ ಕೇಳಿರುತ್ತಾರೆ. ಇದರಿಂದ, ಕುಪಿತಗೊಂಡ ಪಿರ್ಯಾದುದಾರರು, ಆರೋಪಿಯ ಶರ್ಟ್ ಕೊರಳಪಟ್ಟಿಗೆ ಕೈ ಹಾಕಿ, ಎಳೆದುಕೊಂಡು ಟೇಬಲ್ ಮೇಲೆ ಇಟ್ಟಿದ್ದ ಹೋಕರ್‌ನಿಂದ ಆರೋಪಿಯ ಹಣಗೆ ಹೊಡೆದು, ಕೈಗಳಿಂದ ಮುಖಕ್ಕೆ ಗುದ್ದಿ, ಸೂಳೆ ಮಗನೆ ಹಣ ಕೇಳ್ತೀಯಾ ಎಂದು ಬೈದು ಹೊಡೆದು ರಕ್ತ ಗಾಯ ಪಡಿಸಿರುತ್ತಾರೆ. ತೀವ್ರ ರಕ್ತ ಗಾಯಗೊಂಡ ಆರೋಪಿಯು ಸರ್ಕಾರಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಈ ಸಂಬಂಧ ಆರೋಪಿಯು ಪಿರ್ಯಾದುದಾರರ ವಿರುದ್ಧ ಪೊಲೀಸ್ ದೂರು ನೀಡಿದ್ದು, ಪಿರ್ಯಾದುದಾರರ ವಿರುದ್ಧ ಪೇಟೆ ಪೊಲೀಸರು ಎಫ್.ಐ.ಆರ್ 21/2024 ರಲ್ಲಿ ಭಾ.ದಂ.ಸಂ ಕಲಂ 323, 324, 504 ರಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಆರೋಪಿಯು ತನ್ನ ವಿರುದ್ಧ ದೂರು ನೀಡುತ್ತಾರೆ ಎಂದು ಆಲೋಚನೆ ಮಾಡಿದ ಪಿರ್ಯಾದುದಾರರು,

ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿ ಪ್ರಕರಣ ದಾಖಲಿಸಿದ್ದಿರುತ್ತದೆ. ಆರೋಪಿಯು ಅಂದು ಕರ್ತವ್ಯಕ್ಕೆ ಹಾಜರಾದ ಹಾಜರಾತಿ ದಾಖಲೆ, ಚಿಕಿತ್ಸೆ ಪಡೆದ ಆಸ್ಪತ್ರೆ ದಾಖಲೆ, ಆರೋಪಿಯು ಪಿರ್ಯಾದುದಾರರಿಂದ ಗಾಯಗೊಂಡಿರುವ ಫೋಟೋಗಳನ್ನು ಹಾಜರುಪಡಿಸಿರುತ್ತಾರೆ. ಆದಕಾರಣ, ತನ್ನ ಅರ್ಜಿಯನ್ನು ಪುರಸ್ಕರಿಸಿ, ತನ್ನನ್ನು ಆರೋಪದಿಂದ ವಿಮೋಚನೆಗೊಳಿಸಬೇಕೆಂದು ಕೋರಿರುತ್ತಾರೆ.

4. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಅರ್ಜಿಗೆ ತಕರಾರನ್ನು ಸಲ್ಲಿಸಿರುತ್ತಾರೆ. ಸದರಿ ತಕರಾರಿನಲ್ಲಿ ಆರೋಪಿತನೇ ತನ್ನ ಅರ್ಜಿಯಲ್ಲಿ ಹೇಳಿಕೊಂಡಂತೆ, ದಿನಾಂಕ:18-01-2024 ರಂದು ಪಿರ್ಯಾದಿಯ ಹೋಟೆಲ್ ನಲ್ಲಿ 12.45 ಕ್ಕೆ ಪಿರ್ಯಾದಿ ತನ್ನ ಮೇಲೆ, ಹಣ ಕೊಡಲು ಕೇಳಿದ್ದಕ್ಕೆ ಕೋಲಿನಿಂದ ಹೊಡೆದು, ಅವಾಚ್ಯವಾಗಿ ಬೈದು, ಕೊಲೆ ಬೆದರಿಕೆ ಹಾಕಿರುತ್ತಾನೆಂದು ಹೇಳಿಕೊಂಡು, ಈಗ ತಾನೂ ಈ ಕೇಸಿನಲ್ಲಿ ಹೇಳಿದ ಘಟನೆಯು ದಿನಾಂಕ ಮತ್ತು ಸಮಯದಲ್ಲಿ ತಾನು ಸರ್ಕಾರಿ ಕರ್ತವ್ಯ ಮಾಡುತ್ತಿದ್ದೆ ಎಂದು ಹೇಳಿರುವುದು ಒಂದಕ್ಕೊಂದು ತಾಳಮೇಳ ಇರುವುದಿಲ್ಲ ಮತ್ತು “Doctrain of Alibee” ಸಿದ್ಧಾಂತವನ್ನು ಪುರಾವೆ ಮಾಡುವ ಜವಾಬ್ದಾರಿ ಅವನ ಮೇಲೆಯೇ ಉಳಿಸಿಕೊಂಡಿರುತ್ತಾರೆ.

ಆದ್ದರಿಂದ, ಸದರಿ ಆರೋಪಿತನು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರುತ್ತಾರೆ.

5. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿ ಪರ ವಾದವನ್ನು ಆಲಿಸಲಾಯಿತು ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಯಿತು. ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶ ಉದ್ಭವಿಸಿರುತ್ತವೆ.

**ಅಂಶಗಳು**

1. ಆರೋಪಿತನು ದಂಡ ಪ್ರಕ್ರಿಯಾ ಸಂಹಿತೆ ಕಲಂ 239 ರಡಿಯಲ್ಲಿ ತನ್ನ ವಿಮೋಚನೆಗಾಗಿ, ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲು ಸಾಕಷ್ಟು ಕಾರಣಗಳಿವೆಯೇ?

2. ಹಾಗಿದ್ದರೆ ಯಾವ ಆದೇಶ?

6. ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರವು ಮುಂದಿನ ಕಾರಣಗಳಿಗಾಗಿ ಈ ಕೆಳಕಂಡತಿವೆ.

**ಅಂಶ. 1** : **ನಕಾರಾತ್ಮಕವಾಗಿ,**

**ಅಂಶ. 2** : ಈ ಕೆಳಕಂಡ ಕಾರಣಗಳಿಂದಾಗಿ ಅಂತಿಮ ಆದೇಶದಂತೆ,

## ಕಾ ರ ಣ ಗ ಳು

7. **ಅಂಶ 1:** ಅಭಿಯೋಜನೆಯ ಪ್ರರಣದ ಸಂಕ್ಷಿಪ್ತ ಸಾರಾಂಶವೇನೆಂದರೆ, ದಿನಾಂಕ:-18-01-2024 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಸಾಗರ ಟೌನ್ ಅಗ್ರಹಾರ ಸರ್ಕಲ್ ಹತ್ತಿರ ಇರುವ ಸದ್ಗುರು ಹೋಟೆಲ್ ನಲ್ಲಿ, ಹೋಟೆಲ್ ಮಾಲೀಕರಾದ ಸಾಕ್ಷಿ 1 ರವರು ಹೋಟೆಲ್ ನಲ್ಲಿ ಇರುವಾಗ ಆರೋಪಿತನು ಹೋಟೆಲ್ ಗೆ ಬಂದು ಕ್ಯಾಷ್ ಕೌಂಟರ್ ಮುಂದೆ ಸಾಕ್ಷಿ 1 ರವರಿಗೆ ನಾಲ್ಕು ವರ್ಷದ ಹಿಂದಿನ ಚೀಟಿ ಹಣ ಕೊಡಬೇಕು ಎಂದು ಸಾಕ್ಷಿ 1 ರವರೊಂದಿಗೆ ಗಲಾಟೆ ಮಾಡಿ, ಸಾಕ್ಷಿ 1 ರವರಿಗೆ ಸೂಳೆ ಮಗನೆ ಎಂದು ಅವಾಚ್ಯವಾಗಿ ಬೈದು ಕೋಲಿ ನಿಂದ ಹೊಟ್ಟೆಯ ಬಲಭಾಗಕ್ಕೆ ಹೊಡೆದು, ನಿನ್ನನ್ನು ಸುಮ್ಮನೆ ಬಿಡುವುದಿಲ್ಲ, ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದು, ಸಾಕ್ಷಿ 1 ರವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುವ ಕಾರಣ, ಆರೋಪಿತನು ಭಾರತೀಯ ದಂಡ ಸಂಹಿತೆಯ ಕಲಂ 504,506,324 ರ ಮೇರೆಗೆ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆ ಎಂಬುದು ಅಭಿಯೋಜನೆಯ ನಿಲುವು ಆಗಿದೆ.

8. ಅರ್ಜಿದಾರನ / ಆರೋಪಿತನ ನಿರ್ಧಿಷ್ಟ ಪ್ರತಿರಕ್ಷೆಯೇನೆಂದರೆ, ಘಟನೆ ನಡೆಯಿತು ಎಂದು ಹೇಳುವ ದಿನದಂದು ತಾನು ತನ್ನ ಕರ್ತವ್ಯದ ಮೇರೆಗೆ ಕಛೇರಿಯಲ್ಲಿ ಹಾಜರಿದ್ದು, ಆ ದಿನ ಈ ಘಟನೆ ನಡೆಯಿತು ಎಂದು ಹೇಳುವ ಸಂದರ್ಭದಲ್ಲಿ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ತೊಡಗಿದ್ದರಿಂದ, ಸದರಿ ಆರೋಪಿತನು ಈ ಘಟನೆಯಲ್ಲಿ ಭಾಗಿಯಾಗಿಲ್ಲ ಎಂದು ಪ್ರತಿರಕ್ಷೆ ತೆಗೆದುಕೊಂಡಿರುತ್ತಾರೆ. ಸದರಿ ಆರೋಪಿತನು ತನ್ನ ಪ್ರತಿರಕ್ಷೆಗೆ ಪೂರಕವಾಗಿ, ವಾದಮಂಡನೆಯ ಕಾಲದಲ್ಲಿ ಎರಡು ಪೋಟೋಗಳನ್ನು ಆಸ್ಪತ್ರೆಯಿಂದ ಬಿಡುಗಡೆಯಾದ ಬಗ್ಗೆ ವೈದ್ಯಾಧಿಕಾರಿಗಳಿಂದ ವರದಿಯನ್ನು ಹಾಗೂ ತಾನು ಆ ದಿನ ಕರ್ತವ್ಯದಲ್ಲಿದ್ದ ಬಗ್ಗೆ ಹಾಜರಾತಿ ಪುಸ್ತಕದ ನಕಲು ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ಆರೋಪಿತನು ಹಾಜರುಪಡಿಸಿರುವ ಹಾಜರಾತಿ ಪುಸ್ತಕದ ನಕಲಿನಂತೆ ದಿನಾಂಕ 18-01-2024 ರಂದು ಆರೋಪಿತನು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿರುತ್ತಾನೆ. ಸದರಿ ಆರೋಪಿತನು ಅಂಚೆ ಕಛೇರಿಯ ನೌಕರನಾಗಿದ್ದ, ಈ ಘಟನೆ ನಡೆದ ಸಂದರ್ಭದಲ್ಲಿ, ತಾನು ಅಂಚೆ ಲಕೋಟೆಗಳನ್ನು ವಿತರಣೆ ಮಾಡಲು ತನ್ನ ಕಾರ್ಯಕ್ಷೇತ್ರದಲ್ಲಿ ಕರ್ತವ್ಯ ನಿರತನಾಗಿದ್ದನು. ಆದಕಾರಣ, ತಾನು ಈ ಘಟನೆಯಲ್ಲಿ ಭಾಗಿಯಾಗಿಲ್ಲ ಎಂದು ಸಾಧನೆ ಮಾಡಿರುತ್ತಾನೆ.

9. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ತಮ್ಮ ತಕರಾರಿನಲ್ಲಿ ಈ ಘಟನೆ ಕಾಲಕ್ಕೆ ಆರೋಪಿತನು ಚಾಸಾ 1 ರವರ ವಿರುದ್ಧ ಪ್ರತಿದೂರನ್ನು ದಾಖಲಿಸಿದ್ದು, ಎರಡೂ ಪ್ರಕರಣಗಳು ವಿಚಾರಣೆ ಹಂತದಲ್ಲಿರುತ್ತವೆ ಎಂದು ತಮ್ಮ ತಕರಾರಿನಲ್ಲಿ ಹೇಳಿರುತ್ತಾರೆ. ಸದರಿ ಆರೋಪಿತನು ಸಲ್ಲಿಸಿರುವ ಅರ್ಜಿಯಲ್ಲಿ ಅಂದು ಅಂದರೆ, ಘಟನೆ ನಡೆದ ದಿನದಂದು ತಾನು ಘಟನಾ ಸ್ಥಳಕ್ಕೆ ಬಂದಾಗ ಮಧ್ಯಾಹ್ನ 12-45 ಗಂಟೆಯಾಗಿದ್ದು, ಆ ಸಮಯದಲ್ಲಿ ಆರೋಪಿತನು ಪಿರ್ಯಾದಿಯ ಹೋಟೆಲ್ ಗೆ ಬಂದಾಗ, ಪಿರ್ಯಾದಿಯು ಕ್ಯಾಷ್ ಕೌಂಟರ್ ನಲ್ಲಿದ್ದು, ಅವನು ತನಗೆ ಕೊಡಬೇಕಾಗಿದ್ದ 4 ಲಕ್ಷ ರೂ ಹಣವನ್ನು ಕೊಡುವಂತೆ ಕೇಳಿದಾಗ, ಪಿರ್ಯಾದಿಯು ಆರೋಪಿತನ ಕೊರಳಪಟ್ಟಿಗೆ ಕೈಹಾಕಿ ಎಳೆದುಕೊಂಡು ಟೇಬಲ್ ಮೇಲೆ ಇದ್ದ ಹೋಕರ್ ನಿಂದ ಆರೋಪಿತನ ಹಣೆಗೆ ಹೊಡೆದು ಅವಾಚ್ಯವಾಗಿ ಬೈದ್ದು ರಕ್ತಗಾಯಪಡಿಸಿರುತ್ತಾನೆ ಎಂಬುದಾಗಿ ಸ್ವತಃ ಹೇಳಿರುತ್ತಾರೆ. ದೋಷಾರೋಪಣಾ ಪಟ್ಟಿ ಹಾಗೂ ದೂರಿನಂತೆ, ದಿನಾಂಕ 18-01-2024 ರಂದು ಮಧ್ಯಾಹ್ನ 12 ಗಂಟೆಗೆ ನಡೆದಿರುತ್ತದೆ. 12-45 ಗಂಟೆ ಸುಮಾರಿಗೆ ಆರೋಪಿತನು ಘಟನಾ ಸ್ಥಳಕ್ಕೆ ಹೋಗಿರುವುದಾಗಿ, ಸ್ವತಃ ತನ್ನ ಅರ್ಜಿಯಲ್ಲಿ ಹೇಳಿರುತ್ತಾರೆ. ಸದರಿ ಆರೋಪಿತನು ಕರ್ತವ್ಯ ನಿರ್ವಹಿಸುವ ಸ್ಥಳವು ಸಾಗರ ಟೌನ್ ನಲ್ಲಿದ್ದು, ಅದೇರೀತಿಯಾಗಿ ಈ ಘಟನೆ ನಡೆದ ಘಟನಾ ಸ್ಥಳವು ಸಾಗರದ ಅಗ್ರಹಾರ ಸರ್ಕಲ್ ನಲ್ಲಿರುತ್ತದೆ.

ಆದ್ದರಿಂದ, ಸದರಿ ಆರೋಪಿತನು ದಿನಾಂಕ 18-01-2024 ರಂದು ತಾನು ತಮ್ಮ ಕಛೇರಿಯ ಹಾಜರಾತಿ ಪುಸ್ತಕದಲ್ಲಿ ಹಾಜರಿದ್ದು ಸಹಿ ಮಾಡಿದ್ದರೂ ಸಹ, ಘಟನಾ ಸ್ಥಳವು ಅಂಚೆ ಕಛೇರಿಯಿಂದ ಸಮೀಪವಿರುವ ಕಾರಣ, ಸದರಿ ಆರೋಪಿತನು ಘಟನಾ ಸ್ಥಳಕ್ಕೆ ಹಾಜರಾಗುವ ಸಾಧ್ಯತೆ ಇದೆ. ಈ ಬಗ್ಗೆ ವಿಚಾರಣೆ ನಡೆಯುವುದು ಅಗತ್ಯವಾಗಿರುತ್ತದೆ.

10. ಅದೇರೀತಿಯಾಗಿ, ಸದರಿ ಆರೋಪಿತನು ಈ ಪ್ರಕರಣದ ಚಾಸಾ 1 ರವರ ವಿರುದ್ಧ ಪ್ರತಿದೂರನ್ನು ಸಲ್ಲಿಸಿದ್ದು, ಆ ಪ್ರಕರಣವೂ ಸಹ ವಿಚಾರಣೆಗೆ ಭಾಗಿ ಇರುತ್ತದೆ. ಸದರಿ ಆರೋಪಿತನು ಭಾರತೀಯ ಸಾಕ್ಷ್ಯಾ ಅಧಿನಿಯಮ ಕಲಂ 11 ರಂತೆ "Doctrain of Alibee" ಸಿದ್ಧಾಂತದ ಅಡಿಯಲ್ಲಿ ಲಾಭ ಪಡೆದು, ತಾನು ಆ ದಿನ ಘಟನಾ ಸ್ಥಳದಲ್ಲಿ ಹಾಜರಿರಲಿಲ್ಲ ಎಂದು ಪ್ರತಿರಕ್ಷೆ ತೆಗೆದುಕೊಂಡಿರುವುದರಿಂದ, ಸದರಿ ಪ್ರತಿರಕ್ಷೆಯನ್ನು ಸಿದ್ದಪಡಿಸುವ ಹೊಣೆಗಾರಿಕೆಯು ಆರೋಪಿತನ ಮೇಲೆ ಇದೆ. ಮೇಲೆ ಹೇಳಿದಂತೆ, ಆರೋಪಿತನು ಕರ್ತವ್ಯ ನಿರ್ವಹಿಸುವ ಅಂಚೆ ಕಛೇರಿ ಮತ್ತು ಘಟನಾ ಸ್ಥಳ ಸಮೀಪ ಇರುವ ಕಾರಣ ಘಟನಾ ದಿನದಂದು ಆರೋಪಿತನು ಘಟನಾ ಸ್ಥಳದಲ್ಲಿ ಹಾಜರಿದ್ದನೇ ಅಥವಾ ಇಲ್ಲವೆ ಎನ್ನುವ ಬಗ್ಗೆ ಪ್ರಕರಣದ ವಿಚಾರಣೆ ನಡೆಸುವ ಅಗತ್ಯವಿದೆ. ಆದಕಾರಣ, ಸದರಿ ಆರೋಪಿತನನ್ನು ಅವನ

ವಿರುದ್ಧದ ಆರೋಪಗಳಿಂದ ವಿಮೋಚನೆ ಗೊಳಿಸಲು ಯಾವುದೇ ಸಕಾರಣಗಳು ಇರುವುದಿಲ್ಲ. ಆದಕಾರಣ, ಆರೋಪಿತನು ದಂ.ಪ್ರ.ಸಂ ಕಲಂ 239 ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಯು ತಿರಸ್ಕರಿಸಲು ಯೋಗ್ಯವಾಗಿದೆ ಎಂಬುದಾಗಿ ಅಭಿಪ್ರಾಯಪಟ್ಟು, ಮೇಲಿನ ಅಂಶ.1 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

11. **ಅಂಶ.2.** ಮೇಲಿನ ಅಂಶ .1 ರಲ್ಲಿ ಚರ್ಚಿಸಿದ ಕಾರಣಗಳಿಗಾಗಿ ಈ ಕೆಳಕಂಡಂತೆ

**ಆದೇಶ**

ಆರೋಪಿತನು ಭಾರತೀಯ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 239 ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಲಾಗಿದೆ.

(ಶೀಘ್ರಲಿಪಿಗಾರರಿಂದ ನೇರವಾಗಿ ಕಂಪ್ಯೂಟರಿನಲ್ಲಿ ಬೆರಳಚ್ಚು ಮಾಡಿಸಿ ನಂತರ ತಪ್ಪುಗಳನ್ನು ಅದನ್ನು ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕಃ 5 ನೇ ಏಪ್ರಿಲ್ 2025 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ.)

(**ಮಾದೇಶ ಎಂ.ವಿ.**,)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.

***

**ಕರೆಕ್ಟೆಡ್**

**05/04/2025**
state by APP
Accused by VS
for orders.

*(ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಪ್ರತ್ಯೇಕ ಆದೇಶದೊಂದಿಗೆ ಘೋಷಿಸಲಾಯಿತು.)*

**ಆದೇಶ**

ಆರೋಪಿತನು ಭಾರತೀಯ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 239 ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಲಾಗಿದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಸಾಗರ**